ದಿನಾಂಕ 21.3.2002ರ ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳು

ಮೊರಾರ್ಜಿದೇಸಾಯಿ ಶಾಲೆಯ ನಿರ್ಮಾಣದಲ್ಲಿ ಕಳಪೆ ಕಾಮಗಾರಿ

1207(1169) ಶ್ರೀ ಚಿಮ್ಮನಕಟ್ಟಿ ಪಾಟೀಲ್, ಜಿಯಾಪುರ ರಿಂಗ್‌ರೋಡ್‌ರವರು: ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದಲ್ಲಿ ಒಟ್ಟು ಎಷ್ಟು ಮೊರಾರ್ಜಿದೇಸಾಯಿ ಮಾ ಶಾಲೆಗಳನ್ನು (ಬಿಸಿಎಂ) ಮಂಜೂರು ಮಾಡಲಾಗಿದೆ. ಅವು ಯಾವ ತಾಲ್ಲೂಕುಗಳಲ್ಲಿವೆ?

2) ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿಗೆ ಮಂಜೂರಾದ ಮೊರಾರ್ಜಿದೇಸಾಯಿ ವಸತಿ (ಬಿಸಿಎಂ) ಶಾಲೆಯ ನಿರ್ಮಾಣದಲ್ಲಿ ಕಳಪೆ ಕಾಮಗಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

3) ಬಂದಿದ್ದಲ್ಲಿ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

1) ರಾಜ್ಯದಲ್ಲಿ 14 ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ (ಬಿಸಿಎಂ) ಮೊರಾರ್ಜಿದೇಸಾಯಿ ಮಾದರಿ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ. ಅವುಗಳ ವಿವರ ಈ ಕೆಳಕಂಡಂತಿದೆ :

ಜಿಲ್ಲೆ	ತಾಲ್ಲೂಕು	ಊರು
ಬೆಂಗಳೂರು (ಗ್ರಾ)	ಹೊಸಕೋಟೆ	ಸೂಲಿಬೆಲೆ
ಬೀದರ್	ಬೀದರ್	ಬಾಗಮಾಲ್
ಚಿಕ್ಕಮಗಳೂರು	ಕಡೂರು	ಕುಪ್ಪಾಳು
ದಾವಣಗೆರೆ	ಹರಿಹರ	ದೇವರಬೆಳಕೆರೆ
ದಕ್ಷಿಣ ಕನ್ನಡ	ಬೆಳ್ತಂಗಡಿ	ಮಚ್ಚಿನ
ಗುಲ್ಬರ್ಗ	ಅಫಜಲ್‌ಪುರ	ಕೂಗನೂರು
	ಆಳಂದ	ಕಡಕಲ್
ಹಾಸನ	ಚನ್ನರಾಯಪಟ್ಟಣ	ಗುರುಮಾರನಹಳ್ಳಿ
	ಹೊಳೆನರಸೀಪುರ	ಹರಿಹರಪುರ
ಹಾವೇರಿ	ಸವಣೂರು	ಸವಣೂರು
ಮೈಸೂರು	ಮೈಸೂರು	ದೊಡ್ಡಕುಂಡಿ

2) ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗಾಗಿ (ಬಿಸಿಎಂ) ಯಾವುದೇ ಹೊರಾಜಿರದೇಶಯ ಮಸು ಜಾರಿ ಇರುವುದಿಲ್ಲ.

3) ಉದ್ಭವಿಸುವುದಿಲ್ಲ.

ಸರ್ಕಾರದ ಮತಿಯಿಂದ ಮೀನುಗಾರಿಕೆ ಕೆರೆಯೋಜನೆ ಬಗ್ಗೆ.

1208(1195) ಶ್ರೀಮತಿ ಅನುಸೂಯಮ್ಮ ನಟರಾಜನ್ ಕೆ.ಎಂ. (ಚಿಕ್ಕಬಳ್ಳಾಪುರ) :— ಮಾನ್ಯ ಮೀನುಗಾರಿಕೆ ಬಂದರು ಮತ್ತು ಪ್ರವೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಸರ್ಕಾರದ ಮತಿಯಿಂದ ನಡೆಯುತ್ತಿರುವ ಮೀನುಗಾರಿಕೆ ಕೆರೆ ಯೋಜನೆಯನ್ನು ಸರ್ಕಾರ ಹಿಂತೆಗೆದುಕೊಂಡಿದೆಯೇ?

2. ಹಾಗಿದ್ದಲ್ಲಿ, ಸಣ್ಣ ರೈತರಿಗೆ ನಷ್ಟವಾಗುವುದಿಲ್ಲವೇ?

3. ವಿಶೇಷ ಘಟಕ ಯೋಜನೆ ಅಡಿಯಲ್ಲಿ (ಎಸ್‌ಸಿಪಿ) ಕೆರೆಗಳನ್ನು ಗುತ್ತಿಗೆ ಕೊಡಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಬಿ. ರಾಮನಾಥ ರೈ (ಮೀನುಗಾರಿಕೆ ಬಂದರು ಮತ್ತು ಪ್ರವೇಶಾಭಿವೃದ್ಧಿ ಸಚಿವರು) :—

1. ಇಲ್ಲ.

2. ಉದ್ಭವಿಸುವುದಿಲ್ಲ.

3. ಹೌದು.

ಸೂಳ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಜಾನುವಾರ ಸಂವರ್ಧನಾ ಕೇಂದ್ರ.

1209(1154) ಶ್ರೀ ಎಸ್. ಅಂಗಾರ (ಸೂಳ್ಯ) :— ಮಾನ್ಯ ಪಶು ಸಂಗೋಪನೆ ಮತ್ತು ಸಣ್ಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸೂಳ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪುತ್ತೂರು ತಾಲ್ಲೂಕಿನ ಕೊಲ ಜಾನುವಾರು ಸಂವರ್ಧನಾ ಕೇಂದ್ರದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲಾಗಿದೆ?

ಆ) ಪ್ರತಿ ಕಾರ್ಯಕ್ರಮಕ್ಕೆ ತಗಲುವ ವೆಚ್ಚ ಎಷ್ಟು? (ವಿವರ ನೀಡುವುದು)

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಣ್ಣ ಸಚಿವರು) :—